3. ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.

4. ಪ್ರಸ್ತುತ ಗ್ರೂಪ್-ಡಿ ನೌಕರರ ವೃಂದದಲ್ಲಿ ನೇಮಕಾತಿ ಮಾಡಲು ನಿಷೇಧವಿದ್ದು, ಅವಶ್ಯವಿರುವೆಡೆ ಬಾಹ್ಯ ಮೂಲಗಳಿಂದ ಸೇವೆ ಪಡೆದು ನಿರ್ವಹಿಸಲು ಕ್ರಮವಹಿಸಲಾಗಿದೆ.

ಬಿ.ಎಂ.ಟಿ.ಸಿ.ಗೆ ಕೊಂಡು ಕೊಂಡ ವೋಲ್ವೋ ಬಸ್ಸುಗಳು

555 (1106) ಶ್ರೀ ಪ್ರಕಾಶ್ ಹೆಚ್.ಎಸ್. (ಹಾಸನ) ಮಾನ್ಯ ಸಾರಿಗೆ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು:- ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:-

ಅ) ಕಳೆದ ಎರಡು ವರ್ಷಗಳಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರು ಖರೀದಿಸಿದ ವೋಲ್ವೋ ಬಸ್‌ಗಳ ಸಂಖ್ಯೆ ಎಷ್ಟು? ಅವುಗಳಿಗೆ ಪಾವತಿಸಲಾದ ಮೊತ್ತವೆಷ್ಟು? ಒಂದು ವೋಲ್ವೋ ಬಸ್ಸನ್ನು ಖರೀದಿಸಲು ಪಾವತಿಸಲಾಗುವ ಮೊತ್ತವೆಷ್ಟು? (ಪೂರ್ಣ ಮಾಹಿತಿ ನೀಡುವುದು)

ಆ) ವೋಲ್ವೋ ಬಸ್‌ಗಳ ಸಂಚಾರದಿಂದಾಗಿ ಬಿ.ಎಂ.ಟಿ.ಸಿ. ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹಾಗಿದ್ದಲ್ಲಿ, ಈ ನಷ್ಟವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ್ (ಮಾನ್ಯ ಸಾರಿಗೆ ಹಾಗೂ ಆಹಾರ ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)

ಅ) 2008–09

(ರೂ. ಗಳಲ್ಲಿ)

ಬಸ್ಸುಗಳ ಸಂಖ್ಯೆ	ಒಂದು ವೋಲ್ವೋ ಬಸ್‌ನ ಮೊತ್ತ	ಒಟ್ಟು ಪಾವತಿಸಲಾದ ಮೊತ್ತ
37	70,02,880.00	25,91,06,560.00
130	70,88,014.00	92.14,41,820.00
34	69,34,132.00	23,57,60,488.00
24 (Jn NURM)	78,18,750.00	18,76,50,000.00
225	–	1,60,39,58,868.00

2009–10

ಬಸ್ಸುಗಳ ಸಂಖ್ಯೆ	ಒಂದು ವೋಲ್ವೋ ಬಸ್‌ನ ಮೊತ್ತ	ಒಟ್ಟು ಪಾವತಿಸಲಾದ ಮೊತ್ತ
67 (Jn NURM)	78,18,750.00	52,38,56,250.00
65 (Jn NURM)	77,68,750.00	50,49,68,750.00
132	–	1,02,88,25,000.00

ಆ) ಬಂದಿದೆ.

ವೋಲ್ವೋ ವಾಹನಗಳ ಕಾರ್ಯಾಚರಣೆಯಲ್ಲಿ ಉಂಟಾಗುವ ನಷ್ಟದ ಬಗ್ಗೆ ವಿವರಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ನಿಗಮದ ಮಂಡಳಿಯಲ್ಲಿ ಚರ್ಚಿಸಿ ಪ್ರತ್ಯೇಕ ವೋಲ್ವೋ ವಿಭಾಗವನ್ನು ನಿಗಮದ ನಿರ್ದೇಶಕರು (ಯೋಜನೆ) ರವರ ಅಧೀನದಲ್ಲಿ ಪ್ರತ್ಯೇಕವಾಗಿ ರಚಿಸಿದ್ದು ವೋಲ್ವೋ ವಾಹನಗಳ ಕಾರ್ಯಾಚರಣೆಯಲ್ಲಿ ಊಂಟಾಗುವ ವೆಚ್ಚವನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ.

ಚಾಮರಾಜನಗರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆಗಳ ವಿವರಗಳು

557 (983) ಶ್ರೀ ಪುಟ್ಟರಂಗಶೆಟ್ಟಿ ಸಿ (ಚಾಮರಾಜನಗರ) (ಮಾನ್ಯ ಸಮಾಜ ಕಲ್ಯಾಣ ಸಚಿವರು):– ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

ಅ) ಚಾಮರಾಜನಗರ ಮತ ಕ್ಷೇತ್ರದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳೆಷ್ಟು; (ಅವುಗಳ ವಿವರಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗಗಳು ಒದಗಿಸುವುದು);

ಆ) ಈ ವಸತಿ ಶಾಲೆಯಲ್ಲಿನ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಡಿ. ಸುಧಾಕರ್ (ಮಾನ್ಯ ಸಮಾಜ ಕಲ್ಯಾಣ ಸಚಿವರು)

ಅ) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಒಟ್ಟು 7 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.